
ಪದಬಂಧ



ಎಡದಿಂದ ಬಲಕ್ಕೆ:

1. ಅವಸರದ ಮಾತು. ಒಪ್ಪುವಂತಹದಲ್ಲ ಬಿಡಿ (4)
3. ಕಡು ಬಡವರ ಬದುಕಿನಲ್ಲಿ ನಿತ್ಯವೂ ಸಮರ (3)
4. ಸುಮ್ಮನಿರುವುದಕ್ಕೂ ಕೊಡಬೇಕೇ ಶುಲ್ಕ? (3)
6. ತಗಡನ್ನು ಮುಟ್ಟದ ಗುಡಾಣದ ತುಂಬ ಇದೇನು ಕಾಳು? (4)
7. ಕೆಳಗಿಳಿದು ತೆಗೆದದ್ದಕ್ಕೆ ಬರೀ ನಿಂದನೆ (4)
9. ವನಸ್ಪತಿಗಳು ಬೆಳೆಯಲು ಸೂರ್ಯನೇ ಕಾರಣ (4)
12. ಹೊಡೆತ-ಬಡಿತಗಳನ್ನು ಈಗಲೇ ನಿಲ್ಲಿಸು (4)
14. ಪಲ್ಲಕ್ಕಿ ಸೇವಾ ಕಾರ್ಯದ ಜೊತೆಗೇ ಇದೇನು ಜಗಳ? (3)
15. ಕಡಲಿನುಬ್ಬರವನ್ನು ಎಳೆದು ತಂದದ್ದು ನಮ್ಮ ದೇಶವೇ? (3)
16. ಸಾರಥಿಯ ಕಾರ್ಯವೆಂದರೆ ತಾತ್ಸಾರ ಏಕೆ? (4)

ಮೇಲಿಂದ ಕೆಳಕ್ಕೆ:

1. ಅಕ್ಕಿ ಗಿರಣಿಯ ಬಳಿ ಅದ್ಭುತ ಮಾತುಗಾರ ಹಕ್ಕಿ (4)
2. ತೇರಿನ ಬಳಿಯಲ್ಲೊಂದು ವೃಕ್ಷ; ಅದನ್ನಪ್ಪಿದ ಬಳ್ಳಿ (4)
3. ಬಗ್ಗಿಸಿದರೆ ಕಂಡದ್ದು ತಳದ ಗಷ್ಟು (3)
5. ಮರಳಿ ಮರಳಿ ನೆನಪಾದ ಕೊಳಲ ಕೃಷ್ಣ (3)
6. ಹಳತಾದರೇನು? ಭದ್ರವಾಗಿದೆ ಬುನಾದಿ (4)
8. ಕಂಡದ್ದನ್ನೆಲ್ಲ ಹಳಿಯುವ ಕೆಟ್ಟ ಮಾತು (4)
10. ವಾರಾಂತ್ಯದ ತನಕ ನೆಲೆನಿಂತ ವ್ಯಾಪಾರಿ (3)
11. ತೃಪ್ತಿ ನೀಡಬಹುದೇ ನೋಡಿ ಶ್ರೀನಿವಾಸನ ಊರು (4)
12. ಅಲ್ಲಿಗೆ ಬರುತ್ತಲೇ ಶುರುವಾಯ್ತು ತೊಂದರೆ, ಕಷ್ಟ (4)
13. ಹುಡುಕುವ ತಂಡದ ಮೇಲೆ ನಿಯಂತ್ರಣ ಇರಲಿ (3)

### 10-4-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಾಸಂಗಿಕ; 3. ಪರಾರ್ಥ; 4. ಸಜ್ಜಿಗೆ; 6. ನೆರೆಯೂರು; 7. ಅನುರಾಗ; 8. ಮತಿಹೀನ; 10. ತಿಮಿಂಗಿಲ; 12. ಅನುಕೂಲ; 14. ಪಾರಾವಾರ; 16. ಗಡವ; 17. ಜತನ; 18. ಕರಗತ.

ಮೇಲಿಂದ ಕೆಳಕ್ಕೆ:


1. ಪ್ರಾರ್ಥನೆ, 2. ಕಸರು; 3. ಪದ್ಮರಾಗ; 5. ಗೆಳತಿ; 7. ಅನುಮತಿ; 9. ನಷ್ಟಕಾಲ; 11. ಗಿಡುಗ; 13. ಅನುಮಾನ; 14. ಪಾವಕ; 15. ರಜತ.

## ಪ್ರಶ್ನಾಂಕಣ

# ಇ.ಎಂ.ಯು. ಸೂಟ್- ಅದೇನು?

ಅದು ಸ್ಪೇಸ್ ಸೂಟ್‌ನ ಒಂದು ವಿಧ. 'ಎಕ್ಸ್‌ಟ್ರಾ ವೆಹಿಕ್ಯುಲಾರ್ ಮೊಬಿಲಿಟಿ ಯೂನಿಟ್ ಸೂಟ್'ನ ಸಂಕ್ಷಿಪ್ತ ರೂಪವೇ ಇ.ಎಂ.ಯು. ಸೂಟ್. ಭೂಮಿಯನ್ನು ಪರಿಭ್ರಮಿಸುತ್ತಿರುವ 'ಅಂತರ ರಾಷ್ಟ್ರೀಯ ವ್ಯೋಮ ನಿಲ್ದಾಣ'ದಲ್ಲಿರುವ ಗಗನ ಯಾತ್ರಿಗಳು ಅಂತರಿಕ್ಷ ನಡಿಗೆಯ ಕಾರ್ಯಕ್ರಮಗಳಿಗಾಗಿ ಆ ಕೃತಕ ಉಪಗ್ರಹದಿಂದ ಹೊರಬರುವಾಗ ಹೊರಗೆ ಇರುವಷ್ಟೂ ಕಾಲ ಧರಿಸುವ ಧರಿಸಲೇಬೇಕಾದ ವಿಶೇಷ ಉಡುಪಿನ ರೂಪದ ಸಾಧನ ಇದು. ಬಾಹ್ಯಾಕಾಶದ ಗಾಳಿ ರಹಿತ, ಒತ್ತಡ ರಹಿತ, ಅತಿ ಶೀತಲ ಪ್ರದೇಶದಲ್ಲಿ ವ್ಯೋಮ ಯಾತ್ರಿಗೆ ವಿಹಿತ ಗಾಳಿ ಒತ್ತಡದ, ವಿಹಿತ ತಾಪಮಾನದ ಪರಿಸ್ಥಿತಿಯನ್ನು ಒದಗಿಸಿ ಉಸಿರಾಟಕ್ಕೆ ಆಮ್ಲಜನಕವನ್ನು ಪೂರೈಸಿ, ವ್ಯೋಮ ನಿಲ್ದಾಣದೊಡನೆ ರೇಡಿಯೋ ಸಂಪರ್ಕವನ್ನೂ ಒದಗಿಸಿ, ವ್ಯೋಮದ ಅಪಾಯಕಾರೀ ಕಸ ಕಣ ವಿಕಿರಣಗಳಿಂದ ರಕ್ಷಣೆಯನ್ನೂ ನೀಡುವ ಅದ್ಭುತ ಸಾಧನ ಈ ಸೂಟು. ನಾನಾ ವಿಧ ಅತಿ ವಿಶೇಷ 'ಬಟ್ಟೆ'ಗಳ ಹತ್ತಾರು ಪದರಗಳಿಂದ ನಿರ್ಮಾಣಗೊಳ್ಳುವ ಈ ಸೂಟ್‌ನ ಹೊರ ಪದರಗಳು ಜಲ ನಿರೋಧಕ, ಗುಂಡು ನಿರೋಧಕ, ಬೆಂಕಿ ನಿರೋಧಕ; ಒತ್ತಡದ ಗಾಳಿಯನ್ನು ಹಿಡಿದಿಡುವ ಒಳಪದರಗಳು. ವ್ಯೋಮ ನಿಲ್ದಾಣದ ಯಾವ ಗಗನ ಯಾತ್ರಿಗಾದರೂ ಸರಿಹೊಂದುವ ಈ ಪ್ರತಿ ಸೂಟ್ ಅನ್ನು ಗರಿಷ್ಠ 25 ಬಾರಿ ಮಾತ್ರ ಧರಿಸಬಹುದು.

ಇ.ಎಂ.ಯು. ಸೂಟ್‌ನ ಇತರ ಮುಖ್ಯ ಭಾಗಗಳು ಇವು: ಬಾಹ್ಯಾಕಾಶದಲ್ಲಿ ವ್ಯೋಮ ನಿಲ್ದಾಣದ ಹೊರಗಿನ ಶಾಶ್ವತ ಕತ್ತಲಿನಲ್ಲಿ ವ್ಯೋಮ ಯಾತ್ರಿಯ ಚಟುವಟಿಕೆಗಳಿಗೆ ಬೆಳಕನ್ನು ಒದಗಿಸಲು ಮತ್ತು ಚಿತ್ರೀಕರಿಸಲು ದೀಪಗಳು ಮತ್ತು ಕ್ಯಾಮರಾ (ಚಿತ್ರದಲ್ಲಿ ಭಾಗ-1); ಮಾತೃ ನೌಕೆಯೊಂದಿಗೆ ಸಂಪರ್ಕದಲ್ಲಿರಲು ಅವಶ್ಯವಾದ ರೇಡಿyo ವ್ಯವಸ್ಥೆಯಿಂದ ಕೂಡಿದ ಹೆಲ್ಮೆಟ್ (ಭಾಗ-2); ವ್ಯೋಮ ಯಾತ್ರಿಯ ಜೀವರಕ್ಷಕ ವ್ಯವಸ್ಥೆಗಳನ್ನೊಳಗೊಂಡ ಬ್ಯಾಕ್ ಪ್ಯಾಕ್‌ನ ನಿಯಂತ್ರಕಗಳು (ಭಾಗ-3; ವ್ಯೋಮ ನಡಿಗೆಯ ಅವಧಿಯ ಯೋಜಿತ ಕ್ರಿಯಾಸರಣಿಯ ವಿವರಗಳ ಪ್ರದರ್ಶಕ (ಭಾಗ-4); ಸಿಲಿಕೋನ್




ರಬ್ಬರ್‌ನ ಸ್ಪರ್ಶ ಸಂವೇದೀ ಕೈಗವಸುಗಳು (ಭಾಗ-5); ವ್ಯೋಮ ಯಾತ್ರಿಯನ್ನು ವ್ಯೋಮ ನಿಲ್ದಾಣಕ್ಕೆ ಬಂಧಿಸಿ ಹಿಡಿವ ಹಗ್ಗ (ಭಾಗ-6 ಮತ್ತು ಚಿತ್ರ-ಬಿ ಯಲ್ಲೂ ಗಮನಿಸಿ) ಹಾಗೂ ಮೆತ್ತಗಿನ ಪಾದ ರಕ್ಷಕ ಬೂಟುಗಳು (ಭಾಗ-7).

ಇಲ್ಲೊಂದು ಮುಖ್ಯ ವಿಷಯ: ಇ.ಎಂ.ಯು. ಸೂಟ್ ವ್ಯೋಮ ನಿಲ್ದಾನದ ಗಗನ ಯಾತ್ರಿಗಳಿಗಷ್ಟೇ ಸೂಕ್ತ. ಚಂದ್ರ ಯಾನ, ಮಂಗಳ ಯಾನ ಇತ್ಯಾದಿ ಇತರ ಬಗೆಯ ಯಾನಗಳನ್ನು ಕೈಗೊಳ್ಳುವ ವ್ಯೋಮ ಯಾತ್ರಿಗಳಿಗೆ ಬೇರೆ ಬೇರೆ ವ್ಯವಸ್ಥೆಗಳನ್ನೊಳಗೊಂಡ ಭಿನ್ನ ಭಿನ್ನ ರಚನೆಗಳ ಸ್ಪೇಸ್ ಸೂಟ್‌ಗಳು ಅತ್ಯವಶ್ಯ. ಹಾಗೆಂದರೆ ಒಂದೇ ಬಗೆಯ ಸ್ಪೇಸ್ ಸೂಟ್ ಎಲ್ಲ ವಿಧ ವ್ಯೋಮ ಯಾನಗಳಿಗೂ ಸೂಕ್ತವಲ್ಲ ಎಂಬುದು ಸ್ಪಷ್ಟ ತಾನೇ?

■ ಎನ್. ವಾಸುದೇವ್